‘ಪವಿ ಕೇರ್‌ಟೇಕರ್’, ‘ತಲೈವನ್ ತಲೈವಿ’, ‘ಸುಮತಿ ಒಲವು’– ಮಲಯಾಳಂ, ತಮಿಳು ಸಿನಿಮಾಗಳಲ್ಲಿ ನಟಿಸಿರುವ ನಟಿ ಜೂಹಿ ಜಯಕುಮಾರ್ ಇದೀಗ ‘ಗಾಡ್ ಪ್ರಾಮಿಸ್’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗ ಪ್ರವೇಶಿಸಿದ್ದಾರೆ. ಕನ್ನಡದಲ್ಲಿ ತಮ್ಮದೊಂದು ರುಜು ಹಾಕುತ್ತಿರುವ ಅವರು ‘ಸುಧಾ’ದೊಂದಿಗೆ ಮಾತಿಗೆ ತೆರೆದುಕೊಂಡಿದ್ದಾರೆ.

# ಕನ್ನಡಕ್ಕೆ ಮಲಯಾಳಂ ಚೆಲುವೆ ಜೂಹಿ



■ ಎಸ್ಸೆನ್

◆ ಮೊದಲ ಬಾರಿ ಕನ್ನಡ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದೀರ. ಹೇಗನ್ನಿಸುತ್ತಿದೆ?

ಕನ್ನಡ ಸಿನಿಮಾರಂಗಕ್ಕೆ ಹೆಜ್ಜೆ ಇಟ್ಟಿರುವುದು ಬಹಳ ಖುಷಿ ಹಾಗೂ ಉತ್ಸಾಹ ತುಂಬಿದೆ. ‘ಕೆಜಿಎಫ್’, ‘ಕಾಂತಾರ’ದಂಥ ಸಿನಿಮಾಗಳನ್ನು ನೋಡಿದ ಮೇಲೆ ನಾನು ಕೂಡ ಕನ್ನಡ ಸಿನಿಮಾಗಳಲ್ಲಿ ನಟಿಸಬೇಕೆಂಬ ಆಸೆ ಮೂಡಿತು. ಇದೊಂದು ವಿಶೇಷ ಭಾವನೆ. ಕನಸೊಂದು ನನಸಾದ ಕ್ಷಣ.

◆ ಯಾವ್ಯಾವ ಕನ್ನಡ ಸಿನಿಮಾಗಳನ್ನು ನೋಡಿದ್ದೀರಿ? ಕನ್ನಡ ಸಿನಿಮಾಗಳ ಬಗ್ಗೆ ಏನಿಷ್ಟವಾಯಿತು?

ಕಾಂತಾರ, ಕೆಜಿಎಫ್, ಸು ಫ್ರಂ ಸೋ, ಚಾರ್ಲಿ 777, ಆಚಾರ್ ಅಂಡ್ ಕೋ, ದಿಯಾ ಸಿನಿಮಾಗಳನ್ನು ನೋಡಿದ್ದೇನೆ. ಕನ್ನಡದಲ್ಲಿ ಗಟ್ಟಿಯಾದ, ಸೊಗಸಾದ ಕಥೆ, ಕಂಟೆಂಟ್ ಹಾಗೂ ಪ್ರಯೋಗಗಳು ನನಗೆ ಬಹಳ ಇಷ್ಟವಾದವು.

◆ ‘ಗಾಡ್ ಪ್ರಾಮಿಸ್’ ಅವಕಾಶ ಸಿಕ್ಕಿದ್ದು ಹೇಗೆ? ಈ ಸಿನಿಮಾಗೆ ಏನೆಲ್ಲಾ ತಯಾರಿಗಳನ್ನು ನಡೆಸಿದಿರಿ?

‘ಗಾಡ್ ಪ್ರಾಮಿಸ್’ ಸಿನಿಮಾಗೆ ಆಡಿಷನ್ ನಡೆಯುತ್ತಿರುವುದು ಕನ್ನಡ ಮೂಲದ ಗೆಳೆಯರೊಬ್ಬರ ಮೂಲಕ ತಿಳಿದು ಆನ್‌ಲೈನ್ ಆಡಿಷನ್ ಕೊಟ್ಟೆ. ಆಮೇಲೆ ನೇರವಾಗಿ ಆಡಿಷನ್‌ನಲ್ಲಿ ಪಾಲ್ಗೊಂಡು ಆಯ್ಕೆಯಾದೆ.

ನನ್ನದು ಕೇರಳ. ಕನ್ನಡದಲ್ಲಿ ಇದು ನನ್ನ ಮೊದಲ ಸಿನಿಮಾವಾದ್ದರಿಂದ ಹಾಗೂ ಭಾಷೆ ನನಗೆ ಗೊತ್ತಿಲ್ಲದ್ದರಿಂದ ಸಾಕಷ್ಟು ಸಿದ್ಧತೆಗಳನ್ನು ನಡೆಸುವುದು ಅವಶ್ಯವಿತ್ತು. ಮೊದಲು ಒಂದಷ್ಟು ಕನ್ನಡ ಸಿನಿಮಾಗಳನ್ನು ನೋಡಿದೆ. ನಂತರ ಮಂಗಳೂರು ಕನ್ನಡದ ಉಚ್ಚಾರಣೆ ಬಗ್ಗೆ ತಿಳಿದುಕೊಂಡೆ. ಆ ಉಚ್ಚಾರಣೆಯಿರುವ ಸಿನಿಮಾಗಳನ್ನು ನೋಡಿದೆ. ಸಿನಿಮಾ ತಂಡದವರು ಮೊದಲು ಕಂಗ್ಲಿಷ್‌ನಲ್ಲಿ ಸ್ಕ್ರಿಪ್ಟ್ ಕಳುಹಿಸಿದರು. ನನ್ನ ಡೈಲಾಗ್ ಆಡಿಯೊಗಳನ್ನು ಕಳುಹಿಸಿದರು. ಪ್ರತಿದಿನ ಡೈಲಾಗ್ ಅಭ್ಯಾಸ ಮಾಡುತ್ತಿದ್ದೆ.

◆ ಈ ಸಿನಿಮಾ ಸ್ಕ್ರಿಪ್ಟ್‌ನಲ್ಲಿ ನಿಮಗೆ ಬಹಳ ಇಷ್ಟವಾದ ಅಂಶ ಯಾವುದು? ನಿಮ್ಮ ಪಾತ್ರ ಹೇಗಿದೆ?

ಕಥೆ ನನಗೆ ಬಹಳ ಇಷ್ಟವಾಯಿತು. ಕೌಟುಂಬಿಕ ಹಾಸ್ಯ ಚಿತ್ರ. ಹಳ್ಳಿ ಮೂಲದ ಕಥೆ. ನನ್ನದು ಅಪ್ಸರಾ ಎನ್ನುವ ಪಾತ್ರ, ಬಹಳ ಕ್ಯೂಟ್ ಅನಿಸಿತು.

◆ ಈ ಸಿನಿಮಾದಲ್ಲಿ ನಟಿಸುವಾಗಿನ ಒಂದು ವಿಶೇಷ ಅನುಭವ...

ಕನ್ನಡ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಮೊದಲು ಕಷ್ಟವಾಗುತ್ತಿತ್ತು. ಶೂಟ್‌ಗೆ ಮುನ್ನ ನನ್ನ ಡೈಲಾಗ್‌ಗಳನ್ನು ಸರಿಯಾಗಿ ಅಭ್ಯಾಸ ಮಾಡಿಕೊಳ್ಳುತ್ತಿದ್ದೆ. ಶೂಟಿಂಗ್ ಸಮಯದಲ್ಲಿ ಚಿತ್ರತಂಡದವರು ಕನ್ನಡದಲ್ಲಿ ಮಾತಾಡುತ್ತಿದ್ದರೆ ನನಗೆ ಏನೂ ಅರ್ಥವಾಗುತ್ತಿರಲಿಲ್ಲ. ಆಮೇಲೆ ನನ್ನ ಸಹ ಕಲಾವಿದರು ಕನ್ನಡ ಕಲಿಸಲು ಆರಂಭಿಸಿದರು. ಈ ವಿಷಯದಲ್ಲಿ ತಂಡ ನನಗೆ ಬಹಳ ಬೆಂಬಲ ನೀಡಿತು.

ಚಿತ್ರೀಕರಣದ ಸ್ಥಳ ಕೂಡ ಸ್ಮರಣೀಯವಾಗಿತ್ತು. ಎರಡು ಮನೆಗಳಲ್ಲಿ ಶೂಟ್ ಮಾಡಿದ್ದೆವು. ಆ ಕುಟುಂಬದವರು ಬಹಳ ಚೆನ್ನಾಗಿ ನಮ್ಮನ್ನು ನಡೆಸಿಕೊಂಡರು. ನನ್ನ ಮನೆಯೇ ಎಂಬ ಭಾವ ಬಂದಿತ್ತು.

◆ ಕನ್ನಡ ಪ್ರೇಕ್ಷಕರಿಗೆ ಏನು ಹೇಳಲು ಬಯಸುತ್ತೀರ?

ಇದು ನನ್ನ ಮೊದಲ ಕನ್ನಡ ಸಿನಿಮಾ. ನಿಮ್ಮ ಬೆಂಬಲ, ಆಶೀರ್ವಾದ ನನ್ನ ಮೇಲಿರಲಿ ಎಂದು ಕೇಳಿಕೊಳ್ಳುವೆ.

◆ ನಿಮ್ಮ ಮುಂದಿನ ನಡೆ...

‘ಗಾಡ್ ಪ್ರಾಮಿಸ್’ನಲ್ಲಿ ಬ್ಯುಸಿ ಇದ್ದೇನೆ. ತಮಿಳು ಸಿನಿಮಾವೊಂದರಲ್ಲಿಯೂ ತೊಡಗಿಕೊಂಡಿದ್ದೇನೆ. ■